ಬೈಲಹೊಂಗಲ ಬಸ್‌ನಿಲ್ದಾಣದ ರಸ್ತೆಗಳ ರಿಪೇರಿ ಹಾಗೂ ಇತರ ಸಾರ್ವಜನಿಕ ಸೌಲಭ್ಯಗಳನ್ನು ಒದಗಿಸುವ ಬಗ್ಗೆ

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) —ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯ ಬೈಲಹೊಂಗಲ ನಗರದಲ್ಲಿ ಇರುವ ಕೆ. ಎಸ್. ಆರ್. ಟಿ. ಸಿ. ಬಸ್ ಸ್ಟಾಂಡ್‌ನಲ್ಲಿ ರಸ್ತೆ ಅತೀ ಕಟ್ಟು ಹೋಗಿದೆ, ಕೂಡಲೇ ಅಲ್ಲಿ ಅಸ್ಫಾಲಿಟಿಂಗ್ (ಡಾಂಬರು) ಮಾಡಿಸಬೇಕು. ಮತ್ತು ಅಲ್ಲಿ ಮೂತ್ರಿಗಳು ಚೆನ್ನಾಗಿ ಇರುವುದಿಲ್ಲ, ಇದರಿಂದ ಸಾರ್ವಜನಿಕರ ಆರೋಗ್ಯಕ್ಕೆ ಅಹಿತವಾಗಲಿಕ್ಕೆ ಹತ್ತಿದೆ. ಆದಕಾರಣ ಕೂಡಲೇ ಇವುಗಳನ್ನು ರಿಪೇರಿ ಮಾಡಲು ಸಾರಿಗೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ (ಮಿನಿಸ್ಟರ್ ಫಾರ್ ಪಬ್ಲಿಕ್ ವರ್ಕ್ಸ್, ಒಳನಾಡು ಜಲಸಾರಿಗೆ ಮತ್ತು ಬಂದರು ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಾರಿಗೆ ಸಚಿವರಿಗೆ ಹೇಳಿ ಸರಿಪಡಿಸುವುದಕ್ಕೆ ಏರ್ಪಾಡು ಮಾಡುತ್ತೇನೆ ಎಂದು ಹೇಳುತ್ತೇನೆ.

ಕೊಲ್ಲಮೊಗ್ರು ಕಲ್ಮಕಾರು ಮಡಿಕೇರಿ ರಸ್ತೆಯ ರಿಪೇರಿ ಕೆಲಸದ ಬಗ್ಗೆ

ಶ್ರೀ ಕೆ. ಕಂಶಾಲ (ಸುಳ್ಯ).—ಮಾನ್ಯ ಅಧ್ಯಕ್ಷರೇ, ಸುಳ್ಯ ತಾಲೂಕಿನ, ಕೊಲ್ಲಮೊಗ್ರು ಕಲ್ಮಕಾರು ಮಡಿಕೇರಿ ಸಂಪರ್ಕ ರಸ್ತೆಯಲ್ಲಿ ಬರುವ ರಸ್ತೆ ಕೆಲಸ ಮತ್ತು ಕೊಲ್ಲಮೊಗ್ರು–ಕಲ್ಮಕಾರು ಸೇತುವೆಗೆ ಕೇಂದ್ರ ಸರಕಾರದ ಯೋಜನೆಯಂತೆ ಸೆಂಟ್ರಲ್ ರೋಡ್ ಫಂಡ್ ಶೀರ್ಷಿಕೆಯಲ್ಲಿ ಒಂದು ಕೋಟಿ ಇಪ್ಪತ್ತಾರು ಲಕ್ಷ ರೂಪಾಯಿ ಮಂಜೂರಾತಿಯಾಗಿ ೧೯೮೩ರಲ್ಲಿ ಹಣ ಬಿಡುಗಡೆಯಾಗಿದೆ. ಈ ಯೋಜನೆಯಲ್ಲಿ ಕೊಲ್ಲಮೊಗ್ರು ಕಲ್ಮಕಾರು ಸೇತುವೆಯ ತಳಪಾಯದ ಒಂದು ಕುಂದವನ್ನು ಮಾಡಿ ೧೯೮೩ನೇ ಇಸವಿಯಿಂದ ಈ ಕೆಲಸವನ್ನು ಸಂಪೂರ್ಣವಾಗಿ ಕೈ ಬಿಡಲಾಗಿದೆ. ನಂತರ ಈ ಕಾಮಗಾರಿಯನ್ನು ಮುಂದುವರಿಸದೇ ಕೆಲಸವನ್ನು ಕೈಗೊಳ್ಳದೇ ಇರಲು ಕಾರಣವೇನು? ಈ ರಸ್ತೆ ಮತ್ತು ಸೇತುವೆಗೆ ಕೇಂದ್ರ ಸರಕಾರದಿಂದ ಮಂಜೂರಾತಿ ಆಗಿ ಬಿಡುಗಡೆಗೊಳಿಸಿದ ಹಣದ ಪರಿಸ್ಥಿತಿ ಏನಾಗಿದೆ? ಆದ್ದರಿಂದ ಈ ನೆನೆಗುದಿಗೆ ಬಿದ್ದ ಕಾಮಗಾರಿಕೆಯನ್ನು ಕೂಡಲೇ ಕೆಲಸ ಪಾರಂಭಿಸಿ ಪೂರ್ತಿಗೊಳಿಸುವಂತೆ ಸಂಬಂಧಪಟ್ಟ ಸಚಿವರನ್ನು ಮತ್ತು ಸರಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ಮಿನಿಸ್ಟರ್ ಫಾರ್ ಪಬ್ಲಿಕ್ ವರ್ಕ್ಸ್, ಒಳನಾಡು ಜಲಸಾರಿಗೆ ಮತ್ತು ಬಂದರು ಖಾತೆ ಸಚಿವರು) —ಮಾನ್ಯ ಅಧ್ಯಕ್ಷರೇ, ಮಾನ್ಯ ಪಿ. ಡಬ್ಲ್ಯು. ಡಿ. ಸಚಿವರು ನಗರಕ್ಕೆ ಬಂದ ತಕ್ಷಣ ಅವರಿಗೆ ತಿಳಿಸಿ, ಉತ್ತರವನ್ನು ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

ಮೈಸೂರು ನಗರ ಪಾಲಿಕೆಯಲ್ಲಿ ಸುಮಾರು 400 ಮಂದಿ ಪೌರಕಾರ್ಮಿಕರ ಮನೆಯ ಬಾಡಿಗೆ ಬಗ್ಗೆ

ಶ್ರೀ ವೇದಾಂತಹೆಬ್ಬಿಗೆ.—ಮಾನ್ಯ ಅಧ್ಯಕ್ಷರೇ ಮೈಸೂರು ನಗರಪಾಲಿಕೆಯಲ್ಲಿ ಮಾಡುವ ಸುಮಾರು ೪೦೦ ಮಂದಿ ಪೌರಕಾರ್ಮಿಕರು ಕಳೆದ ೩೦ ವರ್ಷಗಳಿಂದ ನಗರಪಾಲಿಕೆಯವರಿಗೆ ಕೊಟ್ಟಿರುವ ಸುಮಾರು ಒಂದೂವರೆ ಚದರದ ಮಣಿ ನ ಗೋಡೆಯ ಮಂಗಳೂರು ಹೆಂಚಿನ ಮನೆಯಲ್ಲಿ ಪಶುಗಳಿಗಿಂತಲೂ ಕಡೆಯಾಗಿ ಜೀವನವನ್ನು ನಡೆಸುತ್ತಿದ್ದಾರೆ. ನೀರು ಚರಂಡಿ ಹಾಗೂ ಇತರ ಯಾವುದೇ ಸೌಲಭ್ಯವಿಲ್ಲದ ಈ ಮನೆಗಳಿಗೆ ನಗರಪಾಲಿಕೆಯವರು ಈ ಬಡಪೌರಕಾರ್ಮಿಕರಿಂದ ಎರಡು ರೂಗಳನ್ನು ಬಾಡಿಗೆ ವಸೂಲಿ ಮಾಡುತ್ತಿದ್ದರು. ಆದರೆ ಇದೇ ಜನವರಿಯಿಂದ ಇದ್ದಕ್ಕಿದ್ದಹಾಗೆ ಈ ಮನೆಗಳ ಬಾಡಿಗೆಯನ್ನು ಅವರ ಸಂಬಳದ ಶೇಕಡ ೧೦ರಷ್ಟು ಬಾಡಿಗೆಯನ್ನು ಅಧಿಕ ಮಾಡಿದ್ದಾರೆ. ಅಂದರೆ ಪ್ರತಿಯೊಬ್ಬ ಬಡ ಪೌರಕಾರ್ಮಿಕನು ಮನುಷ್ಯರು ವಾಸ ಮಾಡಲು ಯೋಗ್ಯವಿಲ್ಲದ ಈ ಮನೆಗಳಿಗೆ ೧೦೦ರೂಪಾಯಿಗಳಿಂದ ೧೫೦ ರೂಪಾಯಿಗಳವರೆವಿಗೆ ಬಾಡಿಗೆಯನ್ನು ಹೆಚ್ಚು ತರಬೇಕಾಗಿದ್ದು ಅಲ್ಲದೆ ಜನವರಿಯಿಂದ ಬಾಕಿ ೧೦೦೦ರೂಪಾಯಿಗಳಿಂದ ೧೫೦೦ ರೂಪಾಯಿಗಳ ಬಾಕಿ ಇದ್ದು ಈಗಾಗಲೇ ೨೯–೬೭ ರಂದು ಈ ಹಣವನ್ನು ವಸೂಲಿ ಮಾಡಿದ್ದಾರೆ. ಇದರ ಬಗ್ಗೆ ಬಡವರಿಗೆ ನಗರಪಾಲಿಕೆಯು ಯಾವ ಮುನ್ಸೂಚನೆ ಇಲ್ಲದೆ ಮತ್ತು ತಾವೇ ಹಾಕಿಕೊಂಡಿರುವ ಗುಡಿಸಲುಗಳಲ್ಲಿ ವಾಸ ಮಾಡುವ ಪೌರಕಾರ್ಮಿಕರಿಂದಲೂ ಈ ಹಣವನ್ನು ವಸೂಲಿ ಮಾಡಲಾಗಿದೆ.